# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಎಸ್.ಎಲ್.ಭೋಜೇಗೌಡ (ಶಿಕ್ಷಕರ ಕ್ಷೇತ್ರ) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 76 (576) |
| ಉತ್ತರಿಸಬೇಕಾದ ದಿನಾಂಕ | 11.07.2023. |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2018 ರಿಂದ 2023 ರವರೆಗೆ ಚಿಕ್ಕಮಗಳೂರು ನಗರಕ್ಕೆ ಒಳಚರಂಡಿ ಯೋಜನೆಯಡಿ ವಿವಿಧ ಕಾಮಗಾರಿಗಳಿಗೆ ನೀಡಿರುವ ಅನುದಾನ ಎಷ್ಟು; | ಚಿಕ್ಕಮಗಳೂರು ನಗರಕ್ಕೆ 2018 ರಿಂದ 2023 ರವರೆಗಿನ ಅನುದಾನದ ವಿವರ ಈ ಕೆಳಗಿನಂತಿದೆ;<br><br>**ರೂ.ಕೋಟಿಗಳಲ್ಲಿ**<br>ಕ್ರ.ಸಂ / ಯೋಜನೆ / ಅನುದಾನ<br>1 / 2 ನೇ ಹಂತದ ಒಳಚರಂಡಿ ಯೋಜನೆ / 19.13<br>2 / 3 ನೇ ಹಂತದ ಒಳಚರಂಡಿ ಯೋಜನೆ / 8.18 |
| ಆ) | ಈ ಒಳಚರಂಡಿ ಯೋಜನೆಯಡಿ ನಡೆದಿರುವ ಕಾಮಗಾರಿಗಳಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಕಾಮಗಾರಿಯ ಗುತ್ತಿಗೆದಾರರು ಹಾಗೂ ಅಧಿಕಾರಿಗಳ ವಿರುದ್ಧ ಯಾವ ಕ್ರಮವನ್ನು ಕೈಗೊಳ್ಳಲಾಗಿದೆ; | ಚಿಕ್ಕಮಗಳೂರು ನಗರದ ಒಳಚರಂಡಿ ಯೋಜನೆಯಡಿ ಕೈಗೊಂಡಿರುವ ಕಾಮಗಾರಿಗಳಲ್ಲಿ ಯಾವುದೇ ಅವ್ಯವಹಾರ ನಡೆದಿರುವುದಿಲ್ಲ.<br><br>2ನೇ ಹಂತದ ಒಳಚರಂಡಿ ಯೋಜನೆಯನ್ನು 6 ಪ್ಯಾಕೇಜ್‌ಅಡಿ ಕೈಗೊಳ್ಳಲಾಗಿರುತ್ತದೆ. ಸದರಿ ಪ್ಯಾಕೇಜ್‌ಗಳಲ್ಲಿ ಪ್ಯಾಕೇಜ್-1 ರ ಕಾಮಗಾರಿಯನ್ನು ಹೊರತುಪಡಿಸಿ, ಬಾಕಿ ಪ್ಯಾಕೇಜ್‌ಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.<br><br>ಪ್ಯಾಕೇಜ್-1ರ ಕಾಮಗಾರಿಯನ್ನು ಪೂರ್ಣಗೊಳಿಸಲು ಗುತ್ತಿಗೆದಾರರಾದ ಮೆ॥ ಅಭಿರಾಂ ಇನ್‌ಫ್ರಾ ಪ್ರಾಜೆಕ್ಟ್ ಪ್ರೈ ಲಿಮಿಟೆಡ್, ಹೈದ್ರಾಬಾದ್ ರವರು ವಿಫಲರಾದ್ದರಿಂದ, ಸದರಿ ಗುತ್ತಿಗೆಯನ್ನು ರದ್ದುಪಡಿಸಿ ಗುತ್ತಿಗೆದಾರರ ವತಿಯಿಂದ ವಿಳಂಭವಾದ ಕಾಮಗಾರಿಗಳಿಗೆ ಗುತ್ತಿಗೆದಾರರಿಗೆ ರೂ.66.12 ಲಕ್ಷಗಳ ದಂಡವನ್ನು ವಿಧಿಸಲಾಗಿರುತ್ತದೆ. |
| ಇ) | ಚಿಕ್ಕಮಗಳೂರು ನಗರದ ಒಳಚರಂಡಿ ಕಾಮಗಾರಿಯ ನೀರನ್ನು ಯಗಚಿ ಹಳ್ಳಕ್ಕೆ ಸೇರುವಂತೆ ಮಾಡಿರುವುದರಿಂದ ಯಗಚಿ | 2ನೇ ಹಂತದ ಒಳಚರಂಡಿ ಯೋಜನೆಯಲ್ಲಿ ಅಳವಡಿಸಲಾಗಿರುವ ಔಟ್‌ಫಾಲ್-1 ಹಾಳಾಗಿರುವುದರಿಂದ ಅಲ್ಲಲ್ಲಿ ಒಳಚರಂಡಿ ನೀರು ಯಗಚಿ |

| | | |
|---|---|---|
| | ಡ್ಯಾಂನ ಸುತ್ತಮುತ್ತಲ ರೈತರಿಗೆ ಅನಾನೂಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹಳ್ಳವನ್ನು ಸೇರುತ್ತಿರುತ್ತದೆ. ದಿನಾಂಕ :06.06.2023 ರಂದು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಯಗಚಿ ಹಳ್ಳ ಕಲುಷಿತಗೊಳ್ಳುವುದನ್ನು ತಪ್ಪಿಸಲು ನಗರದ ಮಲ್ಲಂದೂರು ಸೇತುವೆಯಿಂದ ಮೂರುಮನೆ ಹಳ್ಳಿವರೆಗೆ ಯಗಚಿ ಹಳ್ಳದ ಎರಡು ಬದಿಯಲ್ಲಿ ಔಟ್‌ಫಾಲ್-1 ಅನ್ನು ಅಳವಡಿಸುವ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಿ ಸರ್ಕಾರದ ಅನುಮೋದನೆಗೆ ಸಲ್ಲಿಸಲು ಸೂಚಿಸಲಾಗಿರುತ್ತದೆ. |
| ಈ) | ಬಂದಿದ್ದಲ್ಲಿ, ಸಮಸ್ಯೆಯನ್ನು ನಿವಾರಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಂಡಿದೆ? | |

**ಸಂಖ್ಯೆ ನಅಇ 39 ಯುಎಂಎಸ್ 2023**

(ಬಿ.ಎಸ್.ಸುರೇಶ)
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು